


'ನಳಚರಿತ' ಪ್ರಸಂಗದಲ್ಲಿ
ನಳನ ಪಾತ್ರಧಾರಿಯಾಗಿ

ಅದನ್ನು ಅದುಮಿಟ್ಟುಕೊಂಡು, ವಿನಯದಿಂದ ಬಾಳುವೆ ಮಾಡಲು ಕಠಿಣ ಪರಿಶ್ರಮ ಮಾಡಬೇಕು. ಹಾಗೆ ನೋಡಿದರೆ ಕಥಕಳಿಯ ಎಲ್ಲ ವಿಚಾರಗಳನ್ನು ನಾನಿನ್ನೂ ಕಲಿತು ಮುಗಿದಿಲ್ಲ. ಇದೊಂದು ಸಾಗರದಲ್ಲಿ ಒಂಚೂರು ನೀರನ್ನಷ್ಟೇ ಗುರುವಾಯೂರಪ್ಪ ನನ್ನ ಬೊಗಸೆಗೆ ಕರುಣಿಸಿದ್ದಾನೆ.

◆ **ಕಲಾಮಂಡಲಂ ಸಂಸ್ಥೆಯ ವಿದ್ಯಾರ್ಥಿಯಾಗಿ, ಅಧ್ಯಾಪಕರಾಗಿ ಮತ್ತು ಪ್ರಾಂಶುಪಾಲರಾಗಿ ನೀವು ಕೆಲಸ ನಿರ್ವಹಿಸಿದ್ದೀರಿ. ಕಲಾಪ್ರಕಾರವನ್ನು ಹೊಸ ತಲೆಮಾರಿನವರು ಹೇಗೆ ಸ್ವೀಕರಿಸುತ್ತಿದ್ದಾರೆ?**

ಇಂದು ಯುವಜನರು ಹಣದ ಕಡೆಗೆ ಹೆಚ್ಚು ಗಮನ ಹರಿಸುತ್ತಿಲ್ಲ. ಅವರ ಮನಸ್ಸಿನಲ್ಲಿ ಈ ಕಲೆಯನ್ನು ಕಲಿಯಬೇಕು ಎಂಬ ಆಗ್ರಹ ಮೂಡಿದರೆ, ಈ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುತ್ತಾರೆ. ಮಾಡುತ್ತಿದ್ದಾರೆ ಕೂಡ. ಆದರೆ ಬಾಲ್ಯದಲ್ಲಿ ನಾನು ಹೆಚ್ಚು ಶಿಕ್ಷಣ ಪಡೆಯಲಾಗದೇ, ಅನುಭವಿಸಿದ ಬಡತನದ ನೆನಪುಗಳ ದೆಸೆಯಿಂದಲಾಗಿ ನಾನು ಮಕ್ಕಳಿಗೆ ಔಪಚಾರಿಕ ಶಿಕ್ಷಣ ಪಡೆಯುವಂತೆ ಒತ್ತಾಯಿಸಿದೆ. ನನ್ನ ಮಗ ಜಯರಾಜನ್ ಕೇಬಲ್ ಟಿ.ವಿ. ಆಪರೇಟರ್ ಆಗಿ ಕೆಲಸ ಮಾಡುತ್ತಾನೆ. ರಘುರಾಜನ್ ಬ್ಯಾಂಕಲ್ಲಿ ಕಾರ್ಯನಿರ್ವಹಿಸುತ್ತಾನೆ. ಇಬ್ಬರಿಗೂ ನಾನು ಕಥಕಳಿ ಅಭ್ಯಾಸ ಮಾಡಿಸಲಿಲ್ಲ.

ಇತ್ತೀಚೆಗೆ ಹದಿಹರೆಯದ ಮಕ್ಕಳು ಹೆಚ್ಚಿನ